# 2012-13 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ 'ಶ್ರೇಷ್ಠ ಕೃಷಿ ಮಹಿಳೆ'

**ವಿಳಾಸ: ಶ್ರೀಮತಿ ಬೇಬಕ್ಕ ಹೇಮಣ್ಣ ಬಾರಂಗಿ**
**ಸಾ : ಹಿರೇಅಣಜಿ ತಾ : ಬ್ಯಾಡಗಿ**
**ಜಿ : ಹಾವೇರಿ**
**ಮೊ. ನಂ. : 9663861958 / 8495827534**



**ಕೃಷಿಯಲ್ಲಿ ಮಾಡಿದ ಸಾಧನೆಗಳು**

**ಸಂಪನ್ಮೂಲಗಳು** : ಶ್ರೀಮತಿ ಬೇಬಕ್ಕನವರು 1 ಎಕರೆ ಒಣ ಬೇಸಾಯ ಹೊಂದಿದ್ದು , 2 ಮಿಶ್ರತಳಿಯ ಆಕಳುಗಳು ಅಲ್ಲದೇ 10 ಕೋಳಿಗಳನ್ನು ಸಾಕಿದ್ದಾರೆ.

**ಮಣ್ಣು ಹಾಗೂ ನೀರಿನ ಸಂರಕ್ಷಣಾ ವಿಧಾನ :** ತಮ್ಮ ಜಮೀನಿನಲ್ಲಿ ಕ್ಷೇತ್ರ ಸಮಪಾತಳ ಮಾಡಿಕೊಂಡಿರುವುದಲ್ಲದೇ ಹೊಲದ ಸುತ್ತಲೂ ಜೈವಿಕ ಹಾಗೂ ಮಣ್ಣಿನ ಬದುಗಳನ್ನು ನಿರ್ಮಿಸಿಕೊಂಡಿದ್ದಾರೆ. ಹೆಚ್ಚಿನ ಮಳೆಯ ನೀರು ಸಂಗ್ರಹಣೆಗಾಗಿ ಕೃಷಿ ಹೊಂಡ ನಿರ್ಮಿಸಿಕೊಂಡಿದ್ದಾರೆ. ಇವರು ತಮ್ಮ ಹೊಲದಲ್ಲಿ ಮಳೆಯ ನೀರಿನ ಕೊಯ್ಲು ಮಾಡಿಕೊಂಡಿದ್ದು, 6 ತಿಂಗಳುಗಳವರೆಗೆ ಇದೇ ನೀರಿನ ಸದುಪಯೋಗ ಮಾಡಿಕೊಂಡು ಇದರಲ್ಲಿ ಮೀನು ಸಾಕಾಣಿಕೆ ಮಾಡಿದ್ದಾರೆ.

**ಬೆಳೆ ಪದ್ಧತಿಗಳು** : ಶ್ರೀಮತಿಯವರು ಏಕ ಬೆಳೆಯಾಗಿ ಗೋವಿನ ಜೋಳ ಹಾಗೂ ಬಹು ಬೆಳೆ ಪದ್ಧತಿಯಲ್ಲಿ ತೆಂಗು,ಪಪ್ಪಾಯ, ಚಿಕ್ಕು, ಅಂಬೆ ಮತ್ತು ನುಗ್ಗೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇದರಲ್ಲಿ ಜೇನು ಸಾಕಾಣಿಕೆ ಮಾಡಿಕೊಂಡಿದ್ದಾರೆ. ಇದಲ್ಲದೇ ತ್ಯಾಜ್ಯನೀಯ ಚೀಲಗಳಲ್ಲಿ ಬದನೆ, ಮೆಣಸು, ಟೊಮ್ಯಾಟೊ ಇತ್ಯಾದಿಗಳನ್ನು ಮನೆಯ ಉಪಯೋಗಕ್ಕೆ ಬೆಳೆದುಕೊಳ್ಳುತ್ತಿದ್ದಾರೆ.

**ಕೃಷಿ/ಕೃಷಿಯೇತರ ಚಟುವಟಿಕೆಗಳು** :ಇವರು ಉಪ ಕಸುಬಾಗಿ ಮೀನುಗಾರಿಕೆ, ಜೇನು ಸಾಕಾಣಿಕೆ ಹಾಗೂ ಕೋಳಿ ಸಾಕಾಣಿಕೆ ಕೈಗೊಂಡಿದ್ದಾರೆ.

**ಮಣ್ಣಿನ ಫಲವತ್ತತೆ ಹಾಗೂ ಉತ್ಪಾದನಾ ನಿರ್ವಹಣೆ** : ಸಾವಯವ ಗೊಬ್ಬರ ಮಹತ್ವವನ್ನು ಅರಿತು, ಎರೆಹುಳು ಗೊಬ್ಬರ, ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ ಹಾಗೂ ಕೋಳಿ ಗೊಬ್ಬರ ಉಪಯೋಗಿಸುತ್ತಾರೆ.

**ಕೃಷಿಯಲ್ಲಿ ಜೈವಿಕ ಪೀಡೆನಾಶಕಗಳ ಬಳಕೆ** : ಟ್ರೈಕೊಡರ್ಮಾವನ್ನು ಗಿಡಗಳಿಗೆ ಮಣ್ಣಿನಿಂದ ಬರುವ ರೋಗಗಳ ನಿಯಂತ್ರಣಕ್ಕಾಗಿ ಬಳಸುತ್ತಿದ್ದಾರೆ.

**ಕೃಷಿ ಯಂತ್ರೋಪಕರಣಗಳು** : ಧಾನ್ಯ ಸಂಸ್ಕರಣಾ ಉಪಕರಣಗಳು, ಕಳೆತೆಗೆಯುವ ಯಂತ್ರಗಳು ಹಾಗೂ ಸಿಂಪರಣಾ ಉಪಕರಣಗಳನ್ನು ಹೊಂದಿದ್ದಾರೆ.

**ಇಳುವರಿ ಹಾಗೂ ಉತ್ಪಾದನೆ**:. ಶ್ರೀಮತಿಯವರು ತಮ್ಮ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಂದ ವಾರ್ಷಿಕ ರೂ. 1,65,000/- ಆದಾಯ ಹೊಂದಿದ್ದಾರೆ. ಶ್ರೀಮತಿ ಬೇಬಕ್ಕ ಬಾರಂಗಿಯವರು ತಮ್ಮ ಜಮೀನಿನಲ್ಲಿ ಅಳವಡಿಸಿಕೊಂಡ ಮಳೆ ನೀರು ಕೊಯ್ಲಿನ ಮಹತ್ವವನ್ನು ಅರಿತು, ಹಿರೇಅಣಜಿ ಗ್ರಾಮದಲ್ಲಿ ಸುಮಾರು 30 ಜನರು ಮಳೆ ನೀರಿನ ಕೊಯ್ಲು ತೊಟ್ಟಿಗಳನ್ನು ತಮ್ಮ ಕ್ಷೇತ್ರಗಳಲ್ಲಿ ನಿರ್ಮಿಸಿಕೊಂಡಿದ್ದಾರೆ. ಇವರು ದೊಡ್ಡ ಪ್ರಮಾಣದಲ್ಲಿ ಎರೆಹುಳ ಗೊಬ್ಬರ ತಯಾರಿಸುವದಲ್ಲದೇ, ಇತರರೂ ಸಹ ತಮ್ಮ ಕ್ಷೇತ್ರಗಳಲ್ಲಿ ಸ್ವತ: ತಯಾರಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತಿದ್ದಾರೆ. ತಾವು ತಯಾರಿಸಿದ ಎರೆಹುಳ ಗೊಬ್ಬರವನ್ನು ವಿವಿಧ ಇಲಾಖೆಗಳಿಗೆ ಮಾರಾಟ ಮಾಡಿದ್ದಾರೆ. ಕೊಯ್ಲೋತ್ತರ ತಂತ್ರಜ್ಞಾನ, ಉತ್ಪನ್ನದ ವರ್ಗೀಕರಣ ಹಾಗೂ ಸಂಸ್ಕರಣೆ ಕೈಗೊಳ್ಳುವುದರಿಂದ ದ್ವಿಗುಣ ಲಾಭ ಗಳಿಸುತ್ತಿದ್ದಾರೆ.

*****